
REVIEW OF RESEARCH

ISSN: 2249-894X
IMPACT FACTOR : 3.8014(UIF)
VOLUME - 6 | ISSUE - 4 | JANUARY – 2017

# ಎ.ಕೆ. ರಾಮೇಶ್ವರರ ಕಾವ್ಯಗಳಲ್ಲಿ ಜಾನಪದೀಯತೆ

**ಶಿವಶರಣಪ್ಪ ಪಿ.ಎಚ್. ಕೋಡಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಗುಲಬರ್ಗಾ.**




ಎ.ಕೆ. ರಾಮೇಶ್ವರರ ಕಾವ್ಯಗಳಲ್ಲಿ ಅನೇಕ ಅಂಶಗಳನ್ನು ಒಳಗೊಂಡಿರುವುದು ತಿಳಿದು ಬರುತ್ತದೆ. ಇವರು ಜಾನಪದೀಯ ಅಂಶಗಳ ಕುರಿತು ವಿಶಿಷ್ಟವಾದ ಕಾವ್ಯಗಳನ್ನು ರಚಿಸಿದ್ದಾರೆ. ಮಗುವಿನ ಜೋಗುಳ ಪದಗಳನ್ನು ಹಾಡುವುದು. ಹಬ್ಬ ಹರಿದಿನಗಳು, ಗೀಗೀಮೇಳ, ಡಂಬರ ಆಟ, ಅಜ್ಜ–ಅಜ್ಜಿಯ ಕಥೆಗಳು ಹೀಗೆ ಅನೇಕ ರೀತಿಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಇವರು ತುಂಬಾ ವಿಶಿಷ್ಟವಾಗಿ ಮಕ್ಕಳಿಗೆ ಇವುಗಳ ಬಗ್ಗೆ ಅರಿವನ್ನುಂಟು ಮಾಡಿದ್ದಾರೆ. ಇವರು ಮಕ್ಕಳಿಗೆ ತಿಳಿಸುವುದಲ್ಲದೇ ಅದರ ಬಗ್ಗೆ ಕಲ್ಪನೆಯನ್ನು ನೀಡಿದ್ದಾರೆ.

**ಜಾನಪದ ಅಂಶಗಳು**

**“ಅಳಬೇಡ ಅಳಬೇಡ**
**ಅಳಬೇಡ ಕಂದ**
**ನೀನಳಲು ಮನೆಗೆಲಸ**
**ನಡೆಯುವುದು ಮಂದ**
............................................
............................................
**ಏಕೆ ನೀ ಅಳುತಿರುವೆ**
**ಹೇಳಪ್ಪ ನನಗೆ”**[1]

ಅಳಬೇಡ ಅಳಬೇಡ ಕಂದ ನೀನು ಅಳುತ್ತಿದ್ದರೆ ಮನೆ ಕೆಲಸವು ನಿಲ್ಲುವುದು. ಜೋಗುಳವ ಹಾಡುವೆನು ತಿಳಿಯಾದ ಭಾಷೆಯಲ್ಲಿ ನೀ ಕೇಳಿ ಕುಣಿದಾಡಬೇಕು. ಲಾಲಿ ಹೇಳುವುದ ಕೇಳು ಕಂದಯ್ಯ, ಹುಣ್ಣಿಮೆಯ ಚಂದ್ರನನನು ನೋಡು, ಮಿನುಗುತಿರುವ ಚಿಕ್ಕೆಗಳು ನಿನ್ನನ್ನು ಕರೆಯುತ್ತಿರುವುದನ್ನು ನೋಡು, ಹಕ್ಕಿಗಳ ಧ್ವನಿಯನ್ನು ಕೇಳಿ ಅಳುವನ್ನು ನುಂಗಿ ಸಂತೋಷದಿಂದ ನಗಬೇಕು. ನೀನು ಏಕೆ ಅಳುತ್ತಿರುವೆ? ಹೇಳಪ್ಪ, ನಿನಗೆ ನೊರೆ ಹಾಲು ಬೇಕೇನು ನನ್ನಪ್ಪ ಎಂದು ಜೋಗುಳ ಹಾಡುವುದರಲ್ಲಿ ಮಗುವನ್ನು ಮಲಗಿಸುವಳು ತಾಯಿ.

**“ಸೊಗಸಿನ ಬೀದಿ ಅಗಸಿಯ ಮುಂದೆ**
**ಡೊಂಬರ ಆಟವು ಬಂದಿಹುದು**
**ಕಂಬವ ನಡೆಸಿ ತಂತಿಯ ಬಿಗಿದು**

**ಆಟದ ಮಂಟಪ ಹೂಡಿಹುದು**

.............................................

.............................................

**ಹಿಡಿಯುತ ಮುಂದಕೆ ಸಾಗುವರು"**[2]

ಹಳ್ಳಿಗಳಲ್ಲಿ ಅಗಸಿಯ ಬಾಗಿಲು ಇರುವುದು ಅದರ ಮುಂದೆ ಡೊಂಬರ ಆಟವು ಬಂದಿರುವುದು. ಕಂಬವನ್ನು ನಡೆಸಿ ತಂತಿಯ ಬಿಗಿದು ಆಟದ ಮಂಟಪವನ್ನು ಹಾಕಿರುವುದು. ಡೊಂಬರ ಮುದುಕನು ಡೋಲನು ಬಾರಿಸಿ ಊರಿನ ಜನರನ್ನು ಕೂಡಿಸಿದನು. ಡೊಂಬರದ ಹುಡುಗ ಕುಲಾಟಿಯನ್ನು ಹೊಡೆಯುತ್ತ ದೈವದ ದೃಷ್ಟಿಯನ್ನು ಸೆಳೆದಿರುವನು. ಅತಂರ, ಜಂತರ ಲಾಗಾ ನಿಂತಲೆ ಜಿಗಿದು ಮಣಿಯುವರು. ಹೊಟ್ಟೆಪಾಡಿಗಾಗಿ ಬೆವರನ್ನು ಸುರಿಸಿ ಡೊಂಬರ ಬಳಗವು ದಣಿಯುವುದು. ಎರಡು ಕಡೆ ಕಂಬವನ್ನು ನೆಡಿಸಿ ನಡುವೆ ತಂತಿಯನ್ನು ಕಟ್ಟಿ ಅದರ ಮೇಲೆ ಜೋಡಿಯ ಕೋಲುಗಳನ್ನು ಕೈಯಲ್ಲಿ ಹಿಡಿದು ನಡೆಯುವರು. ಕಾಲಲ್ಲಿ ತಂತಿಯನ್ನು ಹಿಡಿಯುವುದರ ಜೊತೆ ಎದೆಯಲ್ಲಿ ಭಯ ತುಂಬಿಕೊಡ್ಡಿದ್ದರು ಮುಂದಕೆ ಸಾಗುವರು. ಈ ರೀತಿ ಆಟವು ನೋಡುವುದೆಂದರೆ ಸರ್ಕಸ್ ನೋಡಿದಂತೆ ಆಗುತ್ತಿರುವುದು. ಅದನ್ನು ಕಾವ್ಯದಲ್ಲಿ ಊರ ಜನರಿಗೆ ಮನೋರಂಜನೆ ನೀಡಿದಂತಾಗುತ್ತದೆ ಎಂದು ತಿಳಿಸಿಕೊಟ್ಟಿದ್ದಾರೆ ಎನ್ನಬಹುದು.

**"ಪಿಂಜಾರ ಹುಸೇನಿ ಬೇಡರ ಶಂಕರ**
**ಹಳಬರ ವಿಠ್ಠಲ ಕೂಡಿದರು**
**ಹಳ್ಳಿ ಜನರಿಗೆ ಹರುಷವ ನೀಡಲು**
**ಗೀ ಗೀ ಮೇಳವ ಕಟ್ಟಿದರು**

.............................................

.............................................

**ಮತ್ತೆ ಹಾಡುವರು ವಿಸ್ತರಿಸಿ"**[3]

ಗ್ರಾಮೀಣ ಜನರಿಗೆ ಹರುಷವನ್ನು ನೀಡಲು ಪಿಂಜಾರ ಹುಸೇನಿ, ಬೇಡರ ಶಂಕರ, ಹಳಬರ ವಿಠ್ಠಲ ಕೂಡಿ ಗೀ ಗೀ ಮೇಳವ ಕಟ್ಟಿದರು. ಮೇಳದ ಸುದ್ದಿಯನ್ನು ಕೇಳಿದ ಜನರು ಇವರನ್ನು ತಪ್ಪದೆ ಕರೆಸುವರು. ಬಸವನ ಕಾಂಡಿಗೆ, ಪೀರನ ಉರುಸಿಗೆ ಇವರ ಮೇಳವು ಬರುತ್ತದೆ. ಹಣ್ಣಿನ ವರ್ಣನೆಯನ್ನು ಬಣ್ಣಿಸಿ ಹಾಡುತ ವಿಠ್ಠಲನು ಕುಣಿದನು. ತುಂತುನಿ ಬಾರಿಸಿ 'ಗೀ ಗೀ' ಎನ್ನುತ ಮೆರಗನು ಶಂಕರನು ಕೊಡುವನು. ವಿಠ್ಠಲ ಹಾಡುವುದನ್ನು ಕೇಳಿ ಎಲ್ಲರೂ ನಗುವರು. ದಪ್ಪನು ಬಾರಿಸಿ ಎಲ್ಲರಿಗೆ ತೆಪ್ಪಗೆ ಕೂಡಿಸಿ ಮತ್ತೆ ವಿವರಿಸಿ ಹಾಡುವನು. ಈ ಕಾವ್ಯದಲ್ಲಿ ಗೀ ಗೀ ಮೇಳ ಎಂಬುವುದು ಒಂದು ಜಾನಪದರ ಮನೋರಂಜನೆಯಾಗಿದೆ ಎನ್ನಬಹುದು.

**"ಅಜ್ಜಿ ರುಚಿ ರುಚಿ ಕಥೆಯ ಹೇಳಲು**
**ಓಣಿ ಮಕ್ಕಳು ನೆರೆವರು**
**ಅಜ್ಜಿ ಹೇಳಿದ ಒಳ್ಳೆ ಮಾತನು**
**ಮುದದಿ ಆಲಿಸುತಿರುವರು**

.............................................

.............................................

**ಜನರ ಮನದಲಿ ಉಳಿವವು"**[4]

ಅಜ್ಜಿ ಕಥೆಯನ್ನು ಹೇಳುವುದನ್ನು ಕೇಳಲು ಓಣಿಯ ಮಕ್ಕಳು ಬರುವರು. ಅಜ್ಜಿ ಹೇಳಿದ ಒಳ್ಳೆ ಮಾತನು ಕೇಳುವರು. ನಮ್ಮ ದೇಶದ ವೀರ ಶೂರ ಪುರುಷರ ಕಥೆಯನ್ನು ಹೇಳುವುದರಲ್ಲಿ ಮಕ್ಕಳ ಮನದಲ್ಲಿ ವೀರ ರಸವನ್ನು ತುಂಬಿ, ಬುದ್ಧಿಶಕ್ತಿಯನ್ನು ಬೆಳೆಸುವವಳು. ನಮ್ಮ ಊರಿನ ಪ್ರೌಢತೆ ಬಗ್ಗೆ ಹೇಳಲು ಅಜ್ಜಿಯು ಸಂತೋಷಪಡುವವಳು. ನಮ್ಮ ಊರಿನ ಕೋಟೆಯ ಕಥೆಯನ್ನು ಹೇಳಿ ಹರುಷದಿಂದ ನಲಿವಳು. ಅಜ್ಜಿ ಹೇಳುವ ಅನೇಕ ಕಥೆಗಳು ದೇಶ ಕೋಶದಿ ಮೆರೆವವು. ನಮ್ಮ ನಾಡಿನ ಪುಣ್ಯ ಬೀಡಿನ ಜನರ ಮನಸ್ಸಿನಲ್ಲಿ ಉಳಿದನು ಆ ಕಥೆಗಳು ಎನ್ನಲಾಗಿದೆ. ಈ ಕಾವ್ಯದಲ್ಲಿ ಕವಿಯು ಅಜ್ಜಿಯು ಮಕ್ಕಳಿಗೆ ಕಥೆ ಹೇಳುವುದು ತುಂಬಾ ಹಳೆಯ

ಕಾಲದಿಂದಲೂ ಬಂದಿರುವುದು. ಅಲ್ಲದೇ ಅಜ್ಜಿಯ ಕಥೆಗಳು ಅವರ ಮನಕ್ಕೆ ಧೈರ್ಯ, ಶೌರ್ಯ, ವೀರತೆ, ಬುದ್ಧಿವಂತರನ್ನಾಗಿಸುವಂತಹದಾಗಿರುತ್ತಿದ್ದವು. ಮಕ್ಕಳು ದಿನವು ರಾತ್ರಿಯಲ್ಲಿ ಅಜ್ಜಿಯ ಕಥೆಯನ್ನು ಕೇಳಿ ಮಲಗುತ್ತಿದ್ದರು ಎನ್ನಬಹುದು.

**"ಕಾಮನ ಹಬ್ಬವು ಬಂದಿಹುದು**
**ಎಳೆಯರು ಎಲ್ಲರು ಕೂಡಿದರು**
**ಬಣ್ಣದ ಡಬ್ಬಿಯ ತುಂಬಿದರು**
**ಗೆಳೆಯರ ಬಟ್ಟೆಗೆ ಗೊಜ್ಜಿದರು**
…………………………………………
…………………………………………
**ಶಂಖವಾದ್ಯವನು ಮಾಡಿದನು"**[5]

ಕಾಮನ ಹಬ್ಬವರು ಬಂದಿರುವುದು ಚಿಕ್ಕ ಮಕ್ಕಳೆಲ್ಲರೂ ಕೂಡಿದರು. ಬಣ್ಣದ ಡಬ್ಬಿಯನ್ನು ತುಂಬಿ ಗೆಳೆಯರ ಬಟ್ಟೆಗೆ ಹಾಕಿದರು. ಹಾದಿ–ಬೀದಿಗೆ ಬಂದಿರುವ ಜನಗಳಿಗೆ ಬಣ್ಣವನ್ನು ಸಿಡಿಸಿದರು. ಆ ಘಳಿಗೆ ಚೀರುತ ಹೆದರುತ ಓಡಿದರು. ಬಣ್ಣವನ್ನು ಮನೆಮನೆಗೆ ಹೋಗಿ ಹಾಕಿದರು. ಬೆರಣಿಯ ರಾಶಿಯನ್ನು ಒಟ್ಟಿದರು. ಕಾಮನ ತಂದಲ್ಲಿಟ್ಟರು, ಕಾಮನ ಗುಡ್ಡಿಗೆ ಸೌದೆ ಹಾಕಿ ಬೆಂಕಿಯನ್ನು ಹಚ್ಚಿದರು. ಶಂಖದ ವಾದ್ಯವನ್ನು ಮಾಡಿದರು. ಈ ಕಾವ್ಯದಲ್ಲಿ ಹೋಳಿ ಹುಣ್ಣಿಮೆಯ ಹಬ್ಬದ ಸಂಭ್ರಮವನ್ನು ಕುರಿತು ಕವಿಯು ತುಂಬಾ ಸ್ವಾರಸ್ಯದಿಂದ ಹೇಳಿರುವುದು ತಿಳಿದು ಬರುತ್ತದೆ.

**"ಯುಗಾದಿ ಹಬ್ಬ**
**ಬಂದಿತು ಅಬ್ಬಾ**
**ಲಗ್ಗೆಯ ಚೆಂಡನು ಆಡೋಣ**
**ಕಾಮನ ಬೂದಿ**
**ಓಕುಳಿಯಾಡಿ**
**ಬುಗ್ಗೆಯ ಹಾಗೆ ಪುಟಿಯೋಣ**
…………………………………………
…………………………………………
**ಹೊಸತನ ನೀಡಿವೆ ಬನ ಬನಕೆ"**[6]

ಯುಗಾದಿ ಹಬ್ಬ ಬಂದಿತು ಎಂದು ಸಂತೋಷದಿಂದ ಲಗ್ಗೆಯ ಚೆಂಡನು ಆಡಣ ಕಾಮನ ಬೂದಿಯನ್ನು ಓಕುಳಿಯಾಡಿ ಬುಗ್ಗರಿಯ ಹಾಗೆ ಪುಟಿಯೋಣ ಎಂದರು. ಹಚ್ಚನೆ ಹಸಿರು ಸೀರೆಯನ್ನು ಧರಿಸಿದ ಭೂದೇವಿಯು ನಲಿಯುತ್ತಿರುವಳು. ನುಗ್ಗೆಯ ಮೊಗ್ಗೆಯ ಕುಪ್ಪಸವನ್ನು ಧರಿಸಿ ಸಂತೋಷಪಡುತ್ತಿರುವಳು ವನದೇವತೆ ಎಂದರು. ಬೇವಿನ ಮರದ ಮುಗುಳು ಹುಣಸಿಯ ಮರದ ಚಿಗುರು ಎಲ್ಲ ಕಡೆ ಹೂವು ಬರುತ್ತಿವೆ. ಕರಿಕೆಯ ಬೇರನ್ನು, ಕಣಗಿಲ ಹೂವು ಭೂಮಿಯಲ್ಲಿ ಬೆಳೆಯುವುದು. ನೇಗಿಲೆ ಗೆರೆಯು, ಕೋಗಿಲದ ಹಾಡು ತಳಿರಿನ ತೋರಣ ಗಿಡ ಗಿಡಕ್ಕೆ ಅಳಿಗಳ ಉಲಿವು, ಗಿಳಿಗಳ ಮಾತುಗಳು ಬನಕ್ಕೆ ಹೊಸತನ ನೀಡುವುದು. ಈ ಕಾವ್ಯದಲ್ಲಿ ಹಬ್ಬ ಹರಿದಿನದಲ್ಲಿ ಯುಗಾದಿ ಹಬ್ಬದಲ್ಲಿ ಪ್ರಕೃತಿಯ ಕುರಿತು ವಿಚಾರವನ್ನು ಅಭಿವ್ಯಕ್ತಪಡಿಸಿದ್ದಾರೆ ಎನ್ನಬಹುದು.

**"ಬಂದಿಹುದು ಸಂಕ್ರಾಂತಿ ಹಬ್ಬ**
**ಜಗಕ್ಕೆಲ್ಲ ಹರುಷ ನೀಡಿ**
**ನೆಲ ಜಲಕೆ ಇಂದು ಮಂಗಳವ ತೀಡಿ**
**ರವಿಬಂದ ಪಯಣ ಮಾಡಿ**
…………………………………………
…………………………………………
**ಬಾಳೋಣ ತಿಂದು–ಉಂಡು"**[7]

ಸಂಕ್ರಾಂತಿ ಹಬ್ಬವು ಬಂದಿರುವುದು ಜಗಕ್ಕೆಲ್ಲ ಸಂತೋಷವನ್ನುಂಟು ನೀಡುವುದು. ನೆಲ ಜಲಕೆ ಇಂದು ಶುಭವಾಗುವುದು. ಸೂರ್ಯನು ಪಯಣ ಮಾಡಿ ಬಂದಿರುವನು. ಹೊಳೆ, ಹಳ್ಳ, ನದಿ, ಕೆರೆಕೊಳ್ಳ ಜಲದಲ್ಲಿ ಮಂಗಳದ ಸ್ನಾವನ್ನು ಮಾಡಿದರು. ಆನ ನಲಿಯುತ್ತಾ ಹೊಸ ಹೊಸ ಬಟ್ಟೆಗಳನ್ನು ಧರಿಸಿ ಹೊಸ ದಿನಕ್ಕೆ ಕರೆಯನ್ನು ನೀಡಿದರು. ಹೊದಲ್ಲಿ ಬೆಳೆದಿರುವ ಹೊಸ ಬೆಳೆ ತಂದು ಸಂಕ್ರಾಂತಿಗೆ ಎಡೆಯನ್ನು ಮಾಡಿದರು. ಮನಕೆ ಮನ ಬೆರೆಸಿ ಪ್ರೀತಿಯಿಂದ ಕುಸುರೆಳ್ಳು ಕೊಟ್ಟು ನಲಿಯುವರು. ಜಗದೊಳಗೆ ಪ್ರೀತಿಯೆಂಬ ದೊಡ್ಡ ವಸ್ತು ಪಡೆಯೋಣ ಕೊಟ್ಟುಕೊಂಡು, ಹಬ್ಬ ಹರಿದಿನಗಳಲ್ಲಿ ಹಳೆದೆಲ್ಲ ಮರೆತು ಉಂಡು–ತಿಂದು ಸಂತೋಷದಿಂದ ಬಾಳೋಣವೆಂದರು. ಈ ಕಾವ್ಯದ ತಾತ್ಪರ್ಯವೆನೆಂದರೆ ಹಬ್ಬದ ದಿನದಲ್ಲಿ ಹಿಂದಿನ ಯಾವುದೇ ನೆನಪು ಇಟ್ಟುಕೊಳ್ಳದೆ ಸಂತೋಷದಿಂದ ಪ್ರೀತಿಯನ್ನು ಹಂಚಿಕೊಂಡು ಬಾಳುವುದು ಮುಖ್ಯವೆಂದು ತಿಳಿಸುತ್ತದೆ.

**"ಅಜ್ಜನ ಹಾಡು ಮಜ್ಜಿಗೆ ಮೊಸರು**
**ಬೆಣ್ಣೆಯ ಹಾಗೆ ತೇಲುವುದು**
**ಅಜ್ಜನ ಹಾಡು ಮಾಗಿದ ಹಣ್ಣು**
**ನಾಲಗೆ ಬರವನು ಕಳೆಯವುದು**
……………………………………….
……………………………………….
**ಆತ್ಮಕ್ಕೆ ಬೆಳಕು ನೀಡುವುದು"**[8]

ಅಜ್ಜನ ಹಾಡು ಎಂದರೆ ಮಜ್ಜಿಗೆ, ಮೊಸರು, ಬೆಣ್ಣೆಯ ಹಾಗೆ ತೇಲುವುದು. ಅಜ್ಜನ ಹಾಡು ಮಾಗಿದ ಹಣ್ಣು ನಾಲಿಗೆ ಬರವನು ಕಳೆಯವುದು. ಅಜ್ಜನ ಹಾಡು ಸಕ್ಕರೆಯ ಹಾಗೆ ಇರುವುದು. ಅಜ್ಜನ ಹಾಡು ನಕಾಸಿದ ತುಪ್ಪ, ತುಪ್ಪ ಮಿದುಳಿಗೆ ತಂಪು ನೀಡುವುದು. ಅಜ್ಜನ ಹಾಡು ಕಷಾಯದ ರಸದಂತೆ, ರೋಗದ ಮೂಲ ಕೀಳುವುದು. ಅಜ್ಜನ ಹಾಡು ಸುಲಿದಿರುವ ಕಬ್ಬು ಮನಸ್ಸಿನ ಮಲಿನತೆಯನ್ನು ತೊಳೆಯುವುದು. ಅಜ್ಜನ ಹಾಡು ಅರಳಿದ ಹೂವು ಹೃದಯಕ್ಕೆ ತಂಪು. ಅಜ್ಜನ ಹಾಡು ಅನುಭವದ ಅಮೃತದಂತೆ ಆತ್ಮಕ್ಕೆ ಬೆಳಕನ್ನು ನೀಡುವುದು. ಈ ಕಾವ್ಯದಲ್ಲಿ ಅಜ್ಜನ ಹಾಡು ಮಕ್ಕಳ ಮನಸ್ಸನ್ನು ಪರಿಶುದ್ಧವಾಗಿಸುವುದರ ಕುರಿತು ಹೇಳಿದ್ದಾರೆ.

**"ಕೊರಳ ಕೊಂಕಿಸಿ**
**ಕಣಿಯು ಹೇಳುತ**
**ಬಂದಳು ಕೊರವಂಜಿಸ**
**ಕಣ್ಣು ಹೊರಳಿಸಿ**
**ಕಣೀ ಹೇಳದಳು**
**ಬಾರಿಸಿ ಗಿಲಗಂಚಿ**
……………………………………….
……………………………………….
**ಬೇಡತಾಳ ಹರಕಿ"**[9]

ಕೊರಳ ಕೊಂಕಿಸಿ ಕಣಿಯನ್ನು ಹೇಳುತ್ತೇನೆ ಕೇಳಿ ಎನ್ನುತ್ತ ಬಂದಳು ಕೊರವಂಜಿ. ಕಣ್ಣು ಹೊರಳಿಸಿ ಕಣಿಯನ್ನು ಗಿಲಗಂಚಿ ಬಾರಿಸಿ ಹೇಳುವಳು. ಸಣ್ಣವಳಾದರೂ ನೀನ ಮೇಲೆ ಇರುವಳು ಒಬ್ಬ ಸವತಿ ಗಾಬರಿ ಏಕೆ? ಹೇಳುವ ಜೋಕೆ ಇಷ್ಟು ಯಾಕೆ ಬೆವತಿರುವೆ? ಎಂದಳು. ಸಿಮೆ ಹೊದಲ್ಲಿರುವ ಬನ್ನಿ ಗಿಡದ ಬಳಿ ಲಕ್ಷ್ಮೀ ಹಳ ಬೆರಕಿ ಮುತ್ತು ಹಚ್ಚಿದ ಕರಿಯ ಸೀರಿಯನ್ನು ಹರಕೆಯ ಬೇಡುತ್ತಾಳೆ ಎಂದು ಹೇಳಿದಳು. ಈ ಕಾವ್ಯದಲ್ಲಿ ಕೊರವಂಜಿಯು ಇರುವ ಸತ್ಯವನ್ನು ಹೇಳುವಳು ಎಂದು ತಿಳಿದು ಬರುತ್ತದೆ.

**ಆಶಯ :**

ಎ.ಕೆ. ರಾಮೇಶ್ವರರ ಕಾವ್ಯಗಳು ಮಕ್ಕಳಿಗೆ ಪ್ರಿಯವಾಗುವಂತಿರುತ್ತವೆ. ಇಷ್ಟೇ ಅಲ್ಲದೆ ಈ ಜಾನಪದೀಯ ಅಂಶಗಳಾದ ಅಜ್ಜ–ಅಜ್ಜಿಯ ಕಥೆ–ಹಾಡುಗಳು, ಹಬ್ಬ–ಹರಿದಿನದ ಸಂಭ್ರಮ, ಗೀಗೀ ಮೇಳ, ಡೊಂಬರ ಅಟ, ಎಲ್ಲವೂ ಮಕ್ಕಳಿಗೆ ಹರುಷ ತುಂಬಿಸುವ ವಿಶಿಷ್ಟ ಕಾವ್ಯಗಳಾಗಿವೆ. ಇವರ ಕಾವ್ಯಗಳಿಂದ ಮಕ್ಕಳಿಗೆ ಬುದ್ಧಿಮಾತು, ಕಿವಿಮಾತುಗಳು ಮನಮುಟ್ಟುವಂತೆ ತಿಳಿಸಿದ್ದಾರೆ.

**ಅಡಿಟಿಪ್ಪಣಿಗಳು**

1. ರಾಮೇಶ್ವರ ಎ.ಕೆ. : ನಂದಿಕೋಲು . ಪು 11. ಕವಿರಾಜಮಾರ್ಗ ಪ್ರಕಾಶನ ಗುಲಬರ್ಗಾ.
2. ರಾಮೇಶ್ವರ ಎ.ಕೆ. : ವಸಂತ ಬಂದ . ಪು 23. ಕವಿರಾಜಮಾರ್ಗ ಪ್ರಕಾಶನ ಗುಲಬರ್ಗಾ.
3. ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ .ಪು 81. ಸಾಗರ ಪ್ರಕಾಶನ ಬೆಂಗಳೂರು.